ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 6th December 1972

The House met in the Assembly Chamber, Vidhana Soudha, at One of the Clock.

Madam SPEAKER (Smt. K. S. NAGARATHNAMMA) in the Chair.

STARRED QUESTIONS

(to which oral Answers were given)

JUDICIAL ENQUIRY INTO THE AFFAIRS OF M.I.S.L.

10. Sri S. BANGARAPPA (Sorab).—

Will the Minister for Industries be pleased to state:—

whether there is any proposal before Government to institute a Judicial enquiry into the causes of the losses at the Mysore Iron and Steel Limited, Bhadravathi?

Sri S. M. KRISHNA (Minister for Industries).—

No.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಹಿಂದೆ ಕೂಡ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಸಾಕಷ್ಟು ಸಕಾರಣಗಳಿವೆ ಎಂದು ಮಾನ್ಯ ಸದಸ್ಯರು ಹೇಳಿದಾಗ, ಸರ್ಕಾರದವರು ಯೋಚನೆ ಮಾಡುತ್ತೇವೆಂದು ಹೇಳಿದ್ದರು. ಹಲವಾರು ಕೋಟಿ ರೂಪಾಯಿಗಳ ಅವ್ಯವಹಾರ ಇಲ್ಲಿ ನಡೆದಿರುವುದರಿಂದ ಈಗಲಾದರೂ ನ್ಯಾಯಾಂಗ ವಿಚಾರಣೆ ಮಾಡುವುದಕ್ಕೆ ಯೋಚನೆ ಮಾಡುತ್ತಿರಾ?

†ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಸರ್ಕಾರದವರು ಆರ್. ಸಿ. ದತ್ ಅವರಿಂದ ತನಿಖೆ ಮಾಡಿಸಲು ಆರ್ಡರ್ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಟಮ್ಸ್ ಆಫ್ ರೆಫರೆನ್ಸ್‌ನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಸದನದ ಟೇಬಲ್ ಮೇಲೆ ಇಡುವುದಕ್ಕೆ ಇಚ್ಛೆಪಡುತ್ತೇನೆ.

---

† Indicates that the remarks or speeches have not been revised by the member concerned.

ಶ್ರೀ ಎಸ್. ಬಂಗಾರಪ್ಪ.—ಶ್ರೀ ದತ್ ಅವರು ಕೇಂದ್ರ ಸರ್ಕಾರದ ಒಬ್ಬರು ಅಧಿಕಾರಿ ಗಳಾಗಿರುವುದರಿಂದ, ಅವರ ವಿಚಾರಣೆಯಿಂದ ನ್ಯಾಯ ದೊರಕುತ್ತದೆಯೇ ಎನ್ನುವ ಸಂಶಯ ಸಾರ್ವಜನಿಕರಲ್ಲಿ ಇದೆ. ಆದ್ದರಿಂದ ದತ್ ಅವರ ಪರದಿಯಿಂದ ನ್ಯಾಯ ದೊರಕುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದ್ದೇ ಆದರೆ ಮತ್ತು ಅವರ ವರದಿ ಸರ್ಕಾರಕ್ಕೆ ಒಪ್ಪಿಗೆಯಾಗ ದಿದ್ದರೆ ನ್ಯಾಯಾಂಗ ವಿಚಾರಣೆಯನ್ನು ಮಾಡಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಹೈಪೊಥೆಟಿಕಲ್ ಪ್ರಶ್ನೆಯಾಗಿದೆ.

ಶ್ರೀ ಎಂ ಎಸ್. ಕೃಷ್ಣನ್.—ದತ್ ಅವರಿಗೆ ವಹಿಸಿರುವ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ನಾನು ಪತ್ರಿಕೆಗಳಲ್ಲಿ ಓದಿರುವ ಪ್ರಕಾರ, ಪ್ರೊಡಕ್ಷನ್‌ನಲ್ಲಿ ಏತಕ್ಕೆ ರಾಸ್ ಆಗುತ್ತದೆ ಎಂಬ ಬಗ್ಗೆ ಮಾತ್ರ ತನಿಖೆ ಮಾಡುವುದಕ್ಕೆ ಅವಕಾಶವಿದೆ. ಆದರೆ ಅಲ್ಲಿನ ನಡೆವಳಿಕೆ ಯಾವ ರೀತಿ ಇದೆ, ಆಡಳಿತ ಯಾವ ರೀತಿ ನಡೆಯುತ್ತಿದೆ, ಏನಾದರೂ ತಪ್ಪಿದರೆ ಅದಕ್ಕೆ ಹೊಣೆಗಾರರು ಯಾರು ಎಂದು ಕಂಡು ಹಿಡಿಯುವುದಕ್ಕೆ ಅವರಿಗೆ ಅಧಿಕಾರವಿಲ್ಲ. ಆದ್ದರಿಂದ ಈ ಬಗ್ಗೆ ಇನ್ನೊಂದು ನ್ಯಾಯಾಂಗ ವಿಚಾರಣೆ ಯನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಈ ಸದನದ ಮುಂದೆ ಹೇಳಿದ್ದೇನೆ. ಎರಡು ವ್ಯವ ಹಾರಗಳು ಸಿ. ಬಿ. ಐ. ನ ವಿಚಾರಣೆಗೆ ಒಳಪಟ್ಟಿವೆ. ಆ ಎರಡು ವ್ಯವಹಾರಗಳನ್ನು ಬಿಟ್ಟು ಉಳಿದಿರ ತಕ್ಕಂಥ ಆರೋಪಗಳು ಏನಿವೆ, ಆ ಆರೋಪಗಳೆಲ್ಲವನ್ನೂ ದತ್ ಅವರು ವಿಚಾರಣೆ ಮಾಡುತ್ತಾರೆ. ಮತ್ತು ಅದಕ್ಕೆ ಬೇಕಾಗುವಂತಹ ಕಾಂಪ್ರಹೆನ್ಸಿವ್ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಡ್ರಾ ಮಾಡಿ ದ್ದೇವೆ. ಇಲ್ಲಿ ನಾವು ಒಂದು ವಿಚಾರವನ್ನು ಗಮನಿಸಬೇಕಾಗಿದೆ. ಏನೆಂದರೆ, ಏನೇ ವಿಚಾರಣೆ ನಡೆಸಿದರೂ ಅದು ಕನ್‌ಸ್ಟ್ರಕ್ಟಿವ್ ಆಗಿರಬೇಕು. ಯಾರೋ ಅಧಿಕಾರಿಗಳನ್ನು, ಯಾರೋ ವ್ಯಕ್ತಿ ಗಳನ್ನು ಈ ವಿಚಾರಣೆಯಲ್ಲಿ ಸಿಕ್ಕಿನಬೇಕೆಂಬ ಕಾರಣದಿಂದ ವಿಚಾರಣೆ ಮಾಡಿಸುತ್ತಿಲ್ಲ. ಸಾರ್ವ ಜನಿಕರಲ್ಲಿ ಮತ್ತು ಈ ಮನೆಯ ಪ್ರತಿನಿಧಿಗಳಲ್ಲಿ ಏನು ಒಂದು ಶಂಕೆ ಉತ್ಪನ್ನವಾಗಿದೆ, ಆ ಒಂದು ಶಂಕೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕೋಸ್ಕರ ಮತ್ತು ಈ ಉಕ್ಕಿನ ಕಾರ್ಖಾನೆ ಪ್ರಗತಿಪಥದಲ್ಲಿ ಕೆಲಸ ಮಾಡುವುದಕ್ಕೆ ಬೇಕಾಗುವಂತಹ ಒಂದು ಭೂಮಿಕೆಯನ್ನು ನಿರ್ಮಾಣ ಮಾಡುವುದಕ್ಕೋಸ್ಕರ ಈ ಒಂದು ವಿಚಾರಣೆಯನ್ನು ಈ ಸದನದ ಅಭಿಪ್ರಾಯದ ಮೇರೆ ಏರ್ಪಾಡು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ತನಿಖೆಯಲ್ಲಿ ಯಾರಾದರು ಒಬ್ಬರು ಅಧಿಕಾರಿಗಳು ತಪ್ಪಿ ತಸ್ಥರು ಎಂದು ಕಂಡುಬಂದರೆ, ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದು ನಿರ್ವಿವಾದ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ದತ್ ಅವರು ನಡೆಸುವ ವಿಚಾರಣೆಯ ಬಗ್ಗೆ ಏನು ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಈ ಸಭೆಯ ಟೇಬಲ್ ಮೇಲೆ ಇಡುತ್ತೇನೆಂದು ಹೇಳಿದರಿ, ಅದರ ವಿವರಗಳನ್ನು ಸ್ವಲ್ಪ ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದು ನಾಲ್ಕೈದು ವಿಚಾರಗಳನ್ನು ಒಳಗೊಂಡಿದೆ. I am placing on the Table. the Terms of Reference which certainly will be circulated to everybody. Those Terms of Reference have been drawn after careful consultation with the Government of India because they have 40 per cent of the shares in the Steel Unit. ಮೊದಲು ರಫ್ ಡ್ರಾಫ್ಟನ್ನು ಕಳುಹಿಸಿಕೊಡಲಾಗಿತ್ತು. ಅದರ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಸಹ ಕೊಟ್ಟಿದ್ದೆ. ಮತ್ತು ಟರ್ಮ್ಸ್ ಆಫ್ ರೆಫರೆನ್ಸನ್ನು ಪ್ರಚಾರಪಡಿಸಿದ್ದೆ. ಈಗ ಅದನ್ನು ಸಣ್ಣಪುಟ್ಟ ಬದಲಾವಣೆ ಮಾಡಿ, ಪರಿಷ್ಕೃತವಾದ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಸಭೆಯ ಮುಂದೆ ಇಡುತ್ತೇನೆ.